Crl.M.7/2023 ಪಿಡಬ್ಲ್ಯೂ-1

ದಿನಾಂಕಃ 03.07.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಎದುರುದಾರರ ಪರ ಶ್ರೀ ಎ.ಎಸ್.ಕೆ. ವಕೀಲರಿಂದ:**

ನನ್ನ ತಾಯಿಯ ಮನೆ ಕಳಗೂರಿನ ದುರ್ಗದಹಳ್ಳಿಯಲ್ಲಿ ಇದೆ. ನಮ್ಮ ಸಂಪ್ರದಾಯದ ಪ್ರಕಾರ ಹುಡುಗಿ ಮನೆಯ ವ್ಯವಸ್ಥೆಯಲ್ಲಿ ಮದುವೆಯಾಗಬೇಕು ಎಂದರೆ ಸರಿ. ನನ್ನ ಮದುವೆ ಎದುರುದಾರರ ಊರಿನ ಸಮೀಪ ಇರುವ ಧರ್ಮಸ್ಥಳದಲ್ಲಿ ಆಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ನನ್ನ ಖರ್ಚಿನಲ್ಲಿ ಆಗಿದೆ ಎಂದು ನುಡಿಯುತ್ತಾರೆ. ಧರ್ಮಸ್ಥಳದ ಮಹೋತ್ಸವ ಕಲ್ಯಾಣ ಮಂಟಪಕ್ಕೆ ರೂ.14,000/- ಬಾಡಿಗೆ ಕೊಟ್ಟಿದ್ದು, ಈ ಬಗ್ಗೆ ದಾಖಲೆ ಇರಬಹುದು. ನಮ್ಮ ಮದುವೆಗೆ ಊಟದ ವ್ಯವಸ್ತೆಯನ್ನು ಕಲ್ಯಾಣ ಮಂಟಪದಲ್ಲಿ ಮಾಡಿಸಿದ್ದು ಯಾರಿಂದ ಮಾಡಿಸಿದ್ದೇವೆ ಎಂದು ಗೊತ್ತಿಲ್ಲ. ನಮ್ಮ ಮದುವೆಯನ್ನು ಧರ್ಮಸ್ಥಳದ ಪುರೋಹಿತರು ಮಾಡಿಸಿರುತ್ತಾರೆ. ಪುರೋಹಿತರ ಹೆಸರು ಗೊತ್ತಿಲ್ಲ. ಮದುವೆ ಸಮಯಕ್ಕೆ ಧಾರ್ಮಿಕ ವಿಧಿವಿಜ್ಞಾನಗಳಿಗೆ ಎಷ್ಟು ಖರ್ಚಾಗಿದೆ ಎಂದು ನನಗೆ ಗೊತ್ತಿಲ್ಲ.

ನಮ್ಮ ಮದುವೆಗೆ ನಮ್ಮ ಕಡೆಯಿಂದ 500 ಜನ ಭಾಗವಹಿಸಿದ್ದರು. ನನ್ನ ಗಂಡನ ಕಡೆಯಿಂದ 1000 ಜನ ಭಾಗವಹಿಸಿದ್ದರು. ನನ್ನ ತಂದೆ ತಾಯಿಗೆ 1 ½ ಎಕರೆ ಜಮೀನಿನ ಆದಾಯ ಇದೆ. ಮದುವೆ ಖರ್ಚನ್ನು ಎದುರುದಾರರ ಮನೆಯವರೇ ಬರಿಸಬೇಕು ಎಂಬ ಷರತ್ತಿನ ಮೇಲೆ ನಮ್ಮ ಮದುವೆಯಾಯಿತು ಎಂದರೆ ಸರಿಯಲ್ಲ. ಆ ಕಾರಣ ನಮ್ಮ ಮದುವೆಯ ಸಂಪೂರ್ಣ ಖರ್ಚನ್ನು ಎದುರುದಾರರೇ ಬರಿಸಿದ್ದು ಅದೇ ಕಾರಣಕ್ಕೆ ಅವರ ಮನೆಯ ಸಮೀಪವೇ ಮದುವೆಯಾಗಿದ್ದಾರೆ ಎಂದರೆ ಸರಿಯಲ್ಲ. ಮದುವೆಯಾಗುವ ಸಮಯದಲ್ಲಿ ಎದುರುದಾರರಿಗೆ ಒಂದು ಮನೆ ಇತ್ತು. ಆ ಮನೆಯಲ್ಲಿ ನಾನು, ಎದುರುದಾರರು ಮತ್ತು ಅವರ ತಾಯಿ ಇದ್ದೆವು, ಆದರೆ ಅವರ ತಂದೆ ಇರಲಿಲ್ಲ. ಆಗ ಎದುರುದಾರರ ತಾಯಿಗೆ 52 ವರ್ಷ ವಯಸ್ಸಾಗಿದ್ದು, ಅವರು ಮನೆ ಕೆಲಸಗಳನ್ನು ಮಾಡುತ್ತಿದ್ದರು. ಮದುವೆಯಾದ ನಂತರ ನಾನು ಯಾವುದೇ ಉದ್ಯೋಗಕ್ಕೆ ಸೇರಿರಲಿಲ್ಲ.

ಮದುವೆಯಾದ 8 ವರ್ಷದ ನಂತರ ಉಜಿರೆಯ ಮುಂಡಾಜೆ ಎಂಬಲ್ಲಿ ಟೈಲರಿಂಗ್ ಶಾಪ್ ಮಾಡಿಕೊಂಡು ಅಲ್ಲಿ ನಾನೊಬ್ಬಳೇ ಕೆಲಸ ಮಾಡುತ್ತಿದ್ದೆ. ನನ್ನ ಅಂಗಡಿ ಇದ್ದ ಕಟ್ಟಡ ಬಾಡಿಗೆಯದ್ದಾಗಿದ್ದು ಅದು ಒಬ್ಬ ಮುಸ್ಲಿಂ ರವರಿಗೆ ಸೇರಿದ್ದಾಗಿತ್ತು. ಆ ಅಂಗಡಿಗೆ ಮಾಸಿಕ ರೂ.1500/- ಬಾಡಿಗೆ ನೀಡುತ್ತಿದ್ದೆ ಹಾಗೂ ಮುಂಗಡವಾಗಿ ರೂ.5000/- ಹಣ ಪಾವತಿ ಮಾಡಿದ್ದೆ. ಮುಂಗಡ ಹಣವನ್ನು ಎದುರುದಾರರೇ ಪಾವತಿ ಮಾಡಿದ್ದರು ಎಂದರೆ ಸರಿ. ಬಾಡಿಗೆಯೂ ಸಹಾ ಎದುರುದಾರರೇ ಪಾವತಿಸುತ್ತಿದ್ದರು ಎಂದರೆ ಸರಿಯಲ್ಲ. ಅದನ್ನು ನಾನೇ ಪಾವತಿಸುತ್ತಿದ್ದೆ. ನಾನು ಮೂರು ವರ್ಷಗಳ ಕಾಲ ಟೈಲರಿಂಗ್ ಶಾಪ್ ನಡೆಸಿದ್ದು ಅದನ್ನು ಬಿಟ್ಟು ಈಗ 7 ವರ್ಷವಾಗಿದೆ. ನಾನು ಕೆಲಸ ಮಾಡುವಾಗ ತಿಂಗಳಿಗೆ 2 ಸಾವಿರ ಆದಾಯ ಇದ್ದು

ಅದು ಬಾಡಿಗೆ ಹಣವೂ ಸೇರಿಕೊಂಡಿದೆ. ನನ್ನ ಆದಾಯದಿಂದಲೇ ಬಾಡಿಗೆ ಕೊಡಬೇಕಾಗಿತ್ತು. ನಾನು ಅಂಗಡಿ ಪ್ರಾರಂಭ ಮಾಡುವ ಮುನ್ನವೇ ನನಗೆ ಇಬ್ಬರು ಮಕ್ಕಳು ಜನಿಸಿದ್ದರು. ನನ್ನ ಇಬ್ಬರು ಮಕ್ಕಳು ಕಳಸಾದ ಮಂಜುನಾಥೇಶ್ವರ ಆಸ್ಪತ್ರೆಯಲ್ಲಿ ಜನಿಸಿದ್ದರು. ಆಸ್ಪತ್ರೆಯ ಬಿಲ್ ಗಳನ್ನು ಎದುರುದಾರರೇ ಬರಿಸಿದ್ದೆರ ಎಂದರೆ ಸರಿಯಲ್ಲ. ಅದನ್ನು ನಮ್ಮ ಮನೆಯವರೇ ಬರಿಸಿದ್ದು ಆ ಬಗ್ಗೆ ಬಿಲ್ ಗಳು ಇಲ್ಲ.

ನಾನು ಮದುವೆಯಾದ ದಿನದಿಂದಲೂ ಎದುರುದಾರರಿಂದ ದೂರ ಬಂದ ದಿನದವರೆಗೂ ಮನೆಯು ಎಲ್ಲಾ ಖರ್ಚುಗಳನ್ನು ಎದುರುದಾರರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಮನೆಯ ಖರ್ಚು ತಿಂಗಳಿಗೆ 2-3 ಸಾವಿರ ಬರುತ್ತಿತ್ತು. ನಮ್ಮ ಮನೆಯಲ್ಲಿ ಫ್ರಿಡ್ಜ್ ಇತ್ತು ಅದನ್ನು ಮತ್ತು ಮನೆಯಲ್ಲಿ ಇದ್ದ ಅರ್ಧಾಂಶದ ಸ್ವತ್ತುಗಳನ್ನು ನಾನೇ ಸ್ಕೀಮ್ ಮೂಲಕ ಖರೀದಿ ಮಾಡಿದ್ದೇನೆ. ಒಟ್ಟು ರೂ.25000/- ಬೆಲೆ ಬಾಳುವ ವಸ್ತುಗಳನ್ನು ಸ್ಕೀಮ್ ಮೂಲಕ ಖರೀದಿ ಮಾಡಿದ್ದೇನೆ. ಮನೆಯಲ್ಲಿ ಮಿಕ್ಸರ್, ಗ್ಯಾಸ್ ಮತ್ತು ಅಡಿಗೆ ಪಾತ್ರೆಗಳು ಇದ್ದವು. ಮನೆಯಲ್ಲಿ ಚಿಕ್ಕ ಟಿ.ವಿ. ಇತ್ತು. ಆ ಟಿ.ವಿ.ಯ ಬೆಲೆ ರೂ.8000/- ಇರಬಹುದು. ಆ ಟಿವಿಯನ್ನು ಎದುರುದಾರರ ಅಕ್ಕ ಮದುವೆಯ ಸಮಯಕ್ಕೆ ಉಡುಗೊರೆಯಾಗಿ ನೀಡಿದ್ದರು. ನಾನು ಖರೀದಿ ಮಾಡಿದ್ದೇನೆ ಎಂದು ಹೇಳಿರುವ ಫ್ರಿಡ್ಜ್ ನ್ನು ಬೆಳ್ತಂಗಡಿಯ ಅಂಗಡಿಯಲ್ಲಿ ಖರೀದಿಸಿದ್ದು, ಅದರ ಬೆಲೆ ಮರೆತುಹೋಗಿದೆ. ಮನೆಯಲ್ಲಿದ್ದ ಫ್ರಿಡ್ಜ್ ಗಾಂಡ್ರೆಜ್ ಕಂಪೇನಿಯದ್ದಾಗಿದ್ದು ಅದನ್ನು ಎದುರುದಾರರು ಬೆಳ್ತಂಗಡಿಯ ಸೋಜಾ ಎಲೆಕ್ಟ್ರಾನಿಕ್ಸ್ ನಲ್ಲಿ ಖರೀದಿಸಿದ್ದಾರೆ ಎಂದರೆ ಸಾಕ್ಷಿಯು ತಾವು ಸಹಾ ಜೊತೆಗೆ ಹೋಗಿದ್ದು ಸ್ಕೀಮ್ ನಲ್ಲಿ ಖರೀದಿಸಿದ್ದು ಎಂದು ನುಡಿಯುತ್ತಾರೆ.

ನಾನು ಬೆ.10.00 ರಿಂದ ಸ.4.30-5.00 ರವರೆಗೂ ಟೈಲರಿಂಗ್ ಶಾಪ್ ನಡೆಸುತ್ತಿದ್ದೆ. ಟೈಲರಿಂಗ್ ಶಾಪ್ ನಮ್ಮ ಮನೆಯಿಂದ ಸಮಾರು ½ ಕಿ.ಮೀ ದೂರದಲ್ಲಿ ಇದ್ದು ನಾನು ನಡೆದುಕೊಂಡು ಹೋಗಿ ಬರುತ್ತಿದ್ದೆ. ಆ ಸಂದರ್ಭದಲ್ಲಿ ಮನೆ ಕೆಲಸವನ್ನು ನಾನೇ ಮಾಡುತ್ತಿದ್ದೆ. ನನ್ನ ಇಬ್ಬರು ಮಕ್ಕಳು ಸೋಮನತಡ್ಕದ ಸರಸ್ವತಿ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿದ್ದಾರೆ. ಹೈಸ್ಕೂಲ್ ನ್ನು ನನ್ನ ದೊಡ್ಡ ಮಗಳು ಕೊಟ್ಟಿಗೆಹಾರದ ಮೊರರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. ಎರಡನೇ ಮಗಳು ನೆಲ್ಲಿತೀರ್ಥ ದ ಮೊರರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 9ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ಎರಡು ವಸತಿ ಶಾಲೆಗಳಲ್ಲಿ ವಸತಿ ಮತ್ತು ವಿದ್ಯಾಭ್ಯಾಸ ಉಚಿತ ಎಂದರೆ ಸರಿ. ಸಾಕ್ಷಿಯ ಸ್ವತಃ ಶುರುವಿನಲ್ಲಿ ಎಲ್ಲವನ್ನು ನಾವೇ ಕೊಡಬೇಕಾಗಿತ್ತು ಎಂದು ನುಡಿಯುತ್ತಾರೆ. ಸರಸ್ವತಿ ಶಾಲೆಗೆ ವರ್ಷಕ್ಕೆ ಶುಲ್ಕ ರೂ.6000/- ಇತ್ತು. ಅದನ್ನು ಇನ್ಸ್ಟಾಲ್ ಮೆಂಟ್ ನಲ್ಲಿ ಕಟ್ಟುತ್ತಿದ್ದವು. ಆ ಶಾಲೆಗೆ ನಾನು ಟೈಲರಿಂಗ್ ಶಾಪ್ ತೆರೆಯುವ 3 ವರ್ಷದ ಹಿಂದೆ ಸೇರಿದ್ದರು. ನನ್ನ ಮಕ್ಕಳ ಪ್ರಾಥಮಿಕ ವಿದ್ಯಾಭ್ಯಾಸದ ಶುಲ್ಕಗಳನ್ನು ಎದುರುದಾರರೇ ಪಾವತಿಸುತ್ತಿದ್ದರು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.